**ಅಧ್ಯಯನಶೀಲತೆ:** ಅಧ್ಯಯನಶೀಲತೆಯು ಅವರ ಜೀವನದ ಉಸಿರಾಗಿತ್ತು. ದಶೋಪನಿಷತ್ತುಗಳ ಪೈಕಿ ಎಂಟು ಉಪನಿಷತ್ತುಗಳು ಅವರಿಗೆ ಕಂಠಸ್ಥವಾಗಿದ್ದುವು. 'ದುರ್ಗಾಸಪ್ತಶತಿ'ಯೂ ಬಾಯಿಪಾಠವಾಗಿತ್ತು. ತಮ್ಮ ಜೀವಿತದ ಕೊನೆಯ ಭಾಗದಲ್ಲಿ ಭಾಗವತಮಹಾಪುರಾಣವನ್ನೂ ತುಲಸೀರಾಮಾಯಣವನ್ನೂ ಆಳವಾಗಿ ಅಧ್ಯಯನ ಮಾಡಿ ಅವುಗಳ ಮೇಲೆ ಹಲವೆಡೆ ಪ್ರವಚನಗಳನ್ನು ನಡೆಸಿಕೊಟ್ಟರು. ಕಾಶಿಯ ಸೇವಾಶ್ರಮದಲ್ಲಿ ಕೆಲವು ವರ್ಷಗಳನ್ನು ಅವರು ಸಾರ್ಥಕವಾಗಿ ಕಳೆದರು. ಆಗ ಅವರಾಡಿದ ಮಾತುಕತೆಯೆಲ್ಲವೂ 'ಸಾಧಕನ ಕೈದೀವಿಗೆ'ಯೆಂಬ ಕೃತಿಯಾಗಿ ಹೊರ ಬಂದಿದೆ.

**ಧೈರ್ಯಂ ಸರ್ವತ್ರ ಸಾಧನಂ :** ತುರೀಯಾನಂದರೆಂದರೆ ಅವರು ನಿರ್ಭಯತೆಯೇ ಮೈವೆತ್ತ ಮೂರ್ತಿಯಾಗಿದ್ದರು. ಹದಿನಾರು ವರ್ಷದ ಯುವಕನಾಗಿದ್ದಾಗ ಒಂದು ದಿನ ಅವರು ಗಂಗಾಸ್ನಾನ ಮಾಡುತ್ತಿದ್ದಾಗ ದೊಡ್ಡದೊಂದು ಮೊಸಳೆ ಅವರತ್ತ ಬಂದಿತು. ಮಾನವಸಹಜವಾದ ಭೀತಿಯಿಂದ ದಡದತ್ತ ಓಡಿಬಂದರು. "ನಾನು ದೇಹವಲ್ಲ, ಇಂದ್ರಿಯಗಳಲ್ಲ, ಮನಸ್ಸಲ್ಲ, ಬುದ್ಧಿಯಲ್ಲ. ಸಚ್ಚಿದಾನಂದಸ್ವರೂಪಿಯಾದ ಶಿವನೇ ನಾನಲ್ಲವೇ, ಆದರೂ ನಾನೇಕೆ ಹೀಗೆ ಅಂಜುಕುಳಿ ಯಾದೆ" ಎಂದು ಎದೆಯುಬ್ಬಿಸಿ ಮತ್ತೆ ನೀರಿಗೆ ಬಿದ್ದರು. ತತ್ಕ್ಷಣಕ್ಕೆ ಆ ಮೊಸಳೆ ತಾನೇ ಮರೆಯಾಗಿಬಿಟ್ಟಿತು.

ದೇಶಾಟನೆಯ ಕಾಲದಲ್ಲಿ ಡೆಹರಾಡೂನ್ ಪಟ್ಟಣದಲ್ಲಿ ಸಂಚರಿಸುತ್ತಿದ್ದಾಗ ಪೊಲೀಸ್ ಅಧಿಕಾರಿಯೊಬ್ಬನು ತುರೀಯಾನಂದರನ್ನು 'ಇವನಾರೋ ಕ್ರಾಂತಿಕಾರಕ ಪುರುಷ, ಸಂಚುಗಾರ, ಸಂನ್ಯಾಸಿವೇಷದಲ್ಲಿದ್ದಾನೆ' ಎಂದು ಭಾವಿಸಿಕೊಂಡು, ಅವರನ್ನು ಹಿಂಬಾಲಿಸಿ ತಡೆದುನಿಲ್ಲಿಸಿದನು. ಅರ್ಥಸಂಬಂಧವಿಲ್ಲದ ಏನೇನೋ ಪ್ರಶ್ನೆಗಳನ್ನು ಕೇಳಿ ದನು. ಆಗ ತುರೀಯಾನಂದರು, "ಏನಯ್ಯಾ, ಹೀಗೆಲ್ಲ ಹುಚ್ಚುಹುಚ್ಚು ಪ್ರಶ್ನೆಗಳನ್ನು ಕೇಳುತ್ತೀಯಲ್ಲಾ" ಎಂದು ಸಿಡುಕಿ ದರು. ಆಗ ಆತನು, "ನಾನೊಬ್ಬ ಪೊಲೀಸ್ ಅಧಿಕಾರಿ, ಯಾರೆಂದು ತಿಳಿದೆ, ಪೊಲೀಸರೆಂದರೆ ನಿನಗೆ ಭಯವಿಲ್ಲವೆ" ಎಂದು ಜಬರ್ದಸ್ತು ಮಾಡಿದನು. ಆಗ ತುರೀಯಾನಂದರು, "ಯಮಧರ್ಮರಾಯನಿಗೇ ಭಯಪಡದ ಸಂನ್ಯಾಸಿಗಳು ನಾವು, ಪೊಲೀಸರಿಗೇಕೆ ಹೆದರಬೇಕು" ಎಂದು ವಾಗ್ಬಾಣವನ್ನು ಬಿಟ್ಟರು. ಆತ ಶರಣಾಗತನಾದನು. ಎಲ್ಲಿ ಹೋದರೂ ಧೈರ್ಯವೇ ಅವರಿಗೆ ನಿಜವಾದ ಸಾಧನವಾಗಿತ್ತು.

ಅಮೇರಿಕದ ಸಂಚಾರದಲ್ಲಿದ್ದಾಗ ಬೋಸ್ಟನ್ ಎಂಬ ಪಟ್ಟಣದಲ್ಲಿ ಸಿರಿವಂತ ಮಹಿಳೆಯೊಬ್ಬಳು ತುರೀಯಾನಂದರಿಗೆ ಆಶ್ರಯ ನೀಡಿದ್ದಳು. ತಾನು ಹೇಳಿದ್ದೇ ಸರಿ ಎಂಬ ದುರಹಂಕಾರದ ಮಹಿಳೆ ಅವಳು. ಯಾವುದೋ ಮಾತುಕತೆಯ ನಡುವೆ, "ನೀವು ನನ್ನ ಅಭಿಪ್ರಾಯವನ್ನು ಒಪ್ಪದಿದ್ದರೆ ನಿಮಗೆ ಮಾಡುತ್ತಿರುವ ಸಹಾಯವನ್ನು ನಿಲ್ಲಿಸಿಬಿಡುತ್ತೇನೆ" ಎಂದಳು. ಆಗ ತುರೀಯಾನಂದರು, "ನಿನ್ನ ಗೊಡ್ಡುಬೆದರಿಕೆಗೆ ನಾನು ಬಗ್ಗುವವನಲ್ಲ. ನಾನು ಸಂನ್ಯಾಸಿ, ದೇವರೇ ನನ್ನ ರಕ್ಷಕ, ಬೋಸ್ಟನ್ ನಗರದ ಬೀದಿಗೆಸೆದರೂ ನಾನು ಅಂಜುವವನಲ್ಲ" ಎಂದರು. ಆಗ ಆ ಮಹಿಳೆ ತಣ್ಣಗಾದಳು.

**ಮುತ್ತುರತ್ನಗಳಿಗಾಗಿ ಮುಳುಗಬೇಕು:** ಒಮ್ಮೆ ವಿದೇಶೀ ಯುವತಿಯೊಬ್ಬಳು "ನಾನೇ ಬ್ರಹ್ಮವಾಗಿದ್ದೇನೆ ಎಂಬು ದನ್ನಾಗಲಿ, ಜಗತ್ತು ಮಿಥ್ಯೆ ಎಂಬುದನ್ನಾಗಲಿ ಅರ್ಥಮಾಡಿಕೊಳ್ಳುವುದು ಕಷ್ಟ, ಸ್ವಾಮೀಜಿ" ಎಂದಳು. ಆಗ ತುರೀಯಾ ನಂದರು, "ಹೌದು ತಾಯಿ, ಅದನ್ನು ಅರ್ಥಮಾಡಿಕೊಳ್ಳಲು ನನಗೂ ಹಲವು ವರ್ಷಗಳೇ ಬೇಕಾದುವು. ಒಮ್ಮೆ ಅರಿತೆವೆಂದರೆ ಮತ್ತೆ ಮಾಡಬೇಕಾದ್ದೇನೂ ಉಳಿಯುವುದಿಲ್ಲ" ಎಂದರು. ಆದರೆ ಆ ಯುವತಿ ಆ ಮಾತನ್ನು ಮನಸ್ಸಿಗೆ ಹಾಕಿಕೊಳ್ಳದೆ, "ಕ್ರೈಸ್ತಧರ್ಮದಲ್ಲಿ ಹಾಗಿಲ್ಲ, ಸುಲಭವಾಗಿ ಅರ್ಥಮಾಡಿಕೊಳ್ಳಬಹುದು, ತೊಡಕುಗಳಿಲ್ಲ" ಎಂದಳು. ಆಗ ತುರೀಯಾನಂದರು ಅದನ್ನೊಪ್ಪದೆ, "ಹೌದು ತಾಯಿ, ನೀನು ಹೇಳುವುದು ದಿಟ. ವೇದಾಂತವೆಂದರೆ ಸುಲಿದ ಬಾಳೆಯ ಹಣ್ಣಲ್ಲ. ಗಾಜಿನ ಮಣಿಗಳನ್ನು ಕಂಡು ಅವೇ ಅದ್ಭುತ ಅನ್ನುವವರು ಮುತ್ತುರತ್ನಗಳನ್ನು ಪಡೆಯಲು ಸಾಗರದಾಳಕ್ಕೆ ಮುಳುಗಬಲ್ಲರೇ" ಎಂದು ದಬಾಯಿಸಿದರು.

ದೇವರನ್ನು ಅಚಲವಾಗಿ ನಂಬುವುದಕ್ಕೂ ಧೈರ್ಯವಿರಬೇಕು. ತುರೀಯಾನಂದರು ಉತ್ತರಕಾಶಿಗೆ ಹೋಗುತ್ತಿದ್ದಾಗ ತುಂಬಾ ಅನಾರೋಗ್ಯಕ್ಕೆ ತುತ್ತಾಗಿಬಿಟ್ಟರು. ಯಾರಾದರೂ ವೈದ್ಯರು ಸಿಗುತ್ತಾರೆಯೋ ಎಂದು ಹುಡುಕುತ್ತ ಹೋಗು ತ್ತಿದ್ದರು. ಆದರೆ ಆಗಲೇ ಅವರು ಎಚ್ಚೆತ್ತುಕೊಂಡು, "ಅಯ್ಯೋ, ನಾನೆಂಥ ಕೆಲಸ ಮಾಡುತ್ತಿದ್ದೇನೆ. ಪರಮಾತ್ಮನೆಂಬ ವೈದ್ಯನಿರುವಾಗ, ಗಂಗಾಜಲವೆಂಬ ದಿವ್ಯವಾದ ಔಷಧವಿರುವಾಗ, ನಾನು ಲೋಕದ ವೈದ್ಯನನ್ನು ಹುಡುಕಿಕೊಂಡು ಹೊರಟೆನಲ್ಲ" ಎಂದು ಗಂಗಾತೀರಕ್ಕೆ ಹೋಗಿ "ನಾರಾಯಣ ನಾರಾಯಣ" ಎನ್ನುತ್ತ, ಎರಡು ಬೊಗಸೆ ನೀರು ಕುಡಿದು ಗುಣಮುಖರಾಗಿಬಿಟ್ಟರು. ಪುರಿಯಲ್ಲಿದ್ದಾಗ ತುರೀಯಾನಂದರು ಕಣ್ಣುನೋವಿಗೆ ತುತ್ತಾದರು. ಆಗ ಅವರ ಸೇವೆ ಮಾಡುತ್ತಿದ್ದವರು ಕಣ್ತಪ್ಪಿನಿಂದ, ಕಣ್ಣಿನ ಔಷಧಿಗೆ ಬದಲು, ಅಲ್ಲಿಯೇ ಇದ್ದ ಅಪಾಯಕಾರಿ ದ್ರಾವಣವನ್ನು ಕಣ್ಣಿಗೆ ಹಾಕಿಬಿಟ್ಟರು. ತಕ್ಷಣವೇ ಸ್ವಾಮಿಗಳು ಅದನ್ನು ಒರೆಸಿ ಹಾಕಿ ಉದ್ವಿಗ್ನರಾಗದೆ, "ತಾಯೆ ಜಗನ್ಮಾತೆ, ನನ್ನ ಕಣ್ಣುಗಳನ್ನು ಕಾಪಾಡು. ನಾನು ಕುರುಡನಾದರೆ ಮುಂದೆ ನನ್ನಿಂದ ಯಾವ ಕಾರ್ಯಸಾಧನೆಯೂ ಆಗಲಾರದು" ಎಂದು ಮೊರೆ ಯಿಟ್ಟರು. ಜಗನ್ಮಾತೆಯ ಕೃಪೆಯೇ ಅವರ ಕಂಗಳನ್ನು ಕಾಪಾಡಿತು. "ಸ್ವಾಮಿ ತುರೀಯಾನಂದರಲ್ಲಿ ಗೀತೋಕ್ತ

ಸ್ಥಿತಪ್ರಜ್ಞನ ಲಕ್ಷಣವನ್ನು ನೋಡುತ್ತೇವೆ. ಶರಣಾಗತಿ ಮತ್ತು ಸ್ವಪ್ರಯತ್ನಗಳೆರಡೂ ಸೌಹಾರ್ದದಿಂದ ಅವರ ಜೀವನದಲ್ಲಿ ನೆಲೆಸಿದ್ದುವು" ಎಂಬ ಸ್ವಾಮಿ ಸೋಮನಾಥಾನಂದಜಿ ಅವರ ಮಾತುಗಳನ್ನು ಈ ಸಂದರ್ಭದಲ್ಲಿ ಸ್ಮರಿಸಬೇಕು (ಶ್ರೀರಾಮಕೃಷ್ಣ ಶಿಷ್ಯಕೋಟಿ, ಪು.೧೩೩).

**ದೇಹ ಕುಸಿಯುತ್ತಿದೆ, ಪ್ರಾಣಗಳು ಹಾರಿಹೋಗುತ್ತಿವೆ:** ಕಠೋರವಾದ ತಪಸ್ಸಿನಿಂದಲೂ ಕಠಿಣವಾದ ಪರಿಶ್ರಮದಿಂದಲೂ ವಿಪುಲವಾದ ದೇಶಸಂಚಾರದಿಂದಲೂ ಅವರ ಆರೋಗ್ಯ ಕ್ರಮಕ್ರಮವಾಗಿ ಹದಗೆಟ್ಟಿತು. ಸಕ್ಕರೆ ಕಾಯಿಲೆಗೆ ತುತ್ತಾಗಿ ಅದರ ಪರಿಣಾಮವಾಗಿ ಬೆನ್ನಿನಲ್ಲಿ ಹುಣ್ಣು ತಲೆದೋರಿ, ಅದಕ್ಕಾಗಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರು. ಅದರಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ. ತಮ್ಮ ಜೀವನಯಾತ್ರೆಯ ಅರವತ್ತನೆಯ ವಯಸ್ಸಿಗೆ ಕಾಲಿಡುತ್ತಿದ್ದಂತೆ ೨೧-೭-೧೯೨೨ ಎಂಬುದು ಅವರ ಬದುಕಿನ ಕೊನೆಯ ದಿನವಾಯಿತು. ಆ ದಿನ ಅವರು ಬೆಳಗಿನಿಂದಲೇ "ನಾವೆಲ್ಲ ಜಗನ್ಮಾತೆಗೆ ಸೇರಿದವರು, ಜಗನ್ಮಾತೆ ನಮ್ಮವಳು" ಎಂದು ಹಲವು ಬಾರಿ ಹೇಳಿದರು. "ಸರ್ವಮಂಗಳ ಮಾಂಗಲ್ಯೇ" ಎಂಬ ಜಗನ್ಮಾತೆಯ ಶ್ಲೋಕವನ್ನು ಹಲವು ಬಾರಿ ಪಠಿಸಿದರು. "ನನ್ನ ದೇಹ ಕುಸಿಯುತ್ತಿದೆ, ಪ್ರಾಣಗಳು ಹಾರಿ ಹೋಗುತ್ತಿವೆ, ನನ್ನ ಕಾಲುಗಳು ನೇರವಾಗುವಂತೆ ಮಾಡಿ, ನನ್ನ ಕೈಗಳು ಮುಗಿಯುವಂತೆ ಮಾಡಿ" ಎನ್ನುತ್ತ, ಹಾಗೆಯೇ ಮಾಡಿಸಿಕೊಂಡು, "ಸತ್ಯಂ ಜ್ಞಾನಮ್ ಅನಂತಂ ಬ್ರಹ್ಮ" ಎಂಬ ಉಪನಿಷತ್ತಿನ ವಾಕ್ಯವನ್ನು ಉಚ್ಚರಿಸುತ್ತ ಪರಬ್ರಹ್ಮವಸ್ತುವಿನಲ್ಲಿ ಲೀನವಾಗಿಬಿಟ್ಟರು.

**ತುರೀಯ ವಚನಾವಳಿ:** ತುರೀಯಾನಂದರ ಉಪದೇಶಗಳು ಬಹುಮುಖವೂ ಮನೋಜ್ಞವೂ ಆಗಿವೆ. ಅವರು ಬದುಕಿನ ಹಿರಿಯಮೌಲ್ಯಗಳನ್ನು ಎತ್ತಿಹಿಡಿದ್ದಾರೆ: (೧) ಮನಸ್ಸಿನಲ್ಲಿ ಚಿಂತಿಸಿದ್ದನ್ನೇ ನಾಲಗೆಯಿಂದ ನುಡಿಯಬೇಕು. ನುಡಿದಂತೆ ನಡೆಯೂ ಇರಬೇಕು. ಸತ್ಯವನ್ನೇ ನುಡಿಯಬೇಕು. ಹಾಗೆ ನುಡಿಯುವಾಗ ಅದು ಪ್ರಿಯವಾದುದೇ ಅಪ್ರಿಯವಾದುದೇ ಎಂಬ ಎಚ್ಚರವೂ ಇರಬೇಕು. (೨) ಸತ್ಕಾರ್ಯವನ್ನು ಮುಂದೂಡದೆ ಆಗಿಂದಾಗಲೇ ಪ್ರಾರಂಭಿಸಬೇಕು. "ನಾನು ಮುಂದಕ್ಕೆ ಹಾಗೆ ಮಾಡುತ್ತೇನೆ, ಹೀಗೆ ಮಾಡುತ್ತೇನೆ" ಎಂದು ಕನಸುಗಳನ್ನು ಕಟ್ಟಿಕೊಂಡರೆ ಸೋಲೇ ಗತಿ. (೩) ದಿವ್ಯಜೀವನವೆಂಬುದು ಛಲದಂಕಮಲ್ಲರಿಗೆ ಮಾತ್ರವೇ ಸಿದ್ಧಿಸುತ್ತದೆ, ಹೇಡಿಗಳು ಹಿಂದೆ ಸರಿಯುತ್ತಾರೆ. (೪) ನಾನು ಈ ಜನ್ಮದಲ್ಲಿಯೇ ದೇವರನ್ನು ಕಾಣುತ್ತೇನೆ ಎಂದು ಮುಷ್ಟಿಯನ್ನು ಬಿಗಿಹಿಡಿದು ಮೇಲೆತ್ತಿ ಶಪಥ ಮಾಡಬೇಕು; ಈ ಜನ್ಮದಲ್ಲಿ ಕಂಡರುಂಟು, ಇಲ್ಲವಾದರೆ ಎಂದೆಂದಿಗೂ ಇಲ್ಲ. (೫) ವಿದ್ಯಾಭ್ಯಾಸ ಮುಗಿದ ಮೇಲೂ ಪುಸ್ತಕಗಳು ನಮ್ಮ ಬಾಳಸಂಗಾತಿಗಳಾಗಬೇಕು. ಗ್ರಂಥಗಳಂತಹ ಗೆಳೆಯರು ಬೇರಾರೂ ಇಲ್ಲ. (೬) ಬೇರೆಯವರಲ್ಲಿರುವ ದೋಷಗಳು ನಮ್ಮಲ್ಲಿಯೇ ಇರುತ್ತವೆ. ಇತರರು ನಿದ್ರೆ ಮಾಡುವುದನ್ನು ನಾವು ನೋಡಬಲ್ಲೆವೇ ಹೊರತು ನಾವು ನಿದ್ರೆಮಾಡುವುದನ್ನು ನೋಡಲಾರೆವು. (೭) ನಾವು ಪರಮಾತ್ಮನ ಸೇವಕರಂತೆ ನಡೆದುಕೊಳ್ಳಬೇಕು. ಸೇವಕತನದ ರುಚಿಯನ್ನು ಅರಿತವರು ಮಾತ್ರವೇ ಒಡೆಯರಾಗಲು ಯೋಗ್ಯರಾಗುತ್ತಾರೆ. ✦

## ಶ್ರೀರಾಮಕೃಷ್ಣ ಸಂಭಾಷಣ ಸುಧೆ

**ಒಬ್ಬ ಪಂಡಿತ: "ನಾವು ಪ್ರಾರ್ಥನೆ ಮಾಡಿದರೆ, ಭಗವಂತ ಕಿವಿಗೊಡುವನೇನು?"**

**ಶ್ರೀರಾಮಕೃಷ್ಣರು: "ಭಗವಂತ ಕಲ್ಪತರು. ಬೇಡಿದ್ದೆಲ್ಲಾ ದೊರೆತುಬಿಡುತ್ತದೆ. ಆದರೆ ಕಲ್ಪತರುವಿನ ಕೆಳಗೆ ನಿಂತು ಪ್ರಾರ್ಥನೆ ಮಾಡಬೇಕು. ಆಗ ಮಾತ್ರವೇ ಪ್ರಾರ್ಥನೆ ಸಫಲಗೊಳ್ಳುತ್ತದೆ. ಆದರೆ ಒಂದು ವಿಷಯ. ಭಗವಂತ ಭಾವಗ್ರಾಹಿ. ಯಾರು ಏನೇನನ್ನು ಭಾವಿಸಿ ಸಾಧನೆ ಮಾಡುತ್ತಾರೊ, ಅವರಿಗೆ ಅದರಂತೆಯೇ ಫಲ ದೊರೆಯುತ್ತದೆ. ಮನಸ್ಸಿನಂತೆ ಮಹಾದೇವ. ಒಬ್ಬ ಐಂದ್ರಜಾಲಿಕ ತನ್ನ ಇಂದ್ರಜಾಲವನ್ನು ಒಬ್ಬ ದೊರೆಯ ಮುಂದೆ ತೋರಿಸುತ್ತಿದ್ದ. ಮಧ್ಯೆ ಮಧ್ಯೆ ಹೇಳುತ್ತಿದ್ದ: "ಓ ರಾಜ, ದುಡ್ಡು ಕೊಡು! ಬಟ್ಟೆ ಬರೆ ಕೊಡು!" ಇದ್ದಕ್ಕಿದ್ದ ಹಾಗೆ ಆತನ ನಾಲಗೆ ಗಂಟಲಿನ ಒಳಕ್ಕೆ ಹೋಗಿ ಸಿಕ್ಕಿಕೊಂಡುಬಿಟ್ಟಿತು. ಕುಂಭಕ ಉಂಟಾಗಿಬಿಟ್ಟಿತು. ಅವನ ಬಾಯಿಂದ ಒಂದು ಮಾತೂ ಇಲ್ಲ, ಶಬ್ದವೂ ಇಲ್ಲ. ಸ್ಪಂದಹೀನನಾಗಿಬಿಟ್ಟ. ಜನ ಭಾವಿಸಿಕೊಂಡರು, ಆತ ಸತ್ತುಹೋದ ಎಂದು. ಆಗ ಎಲ್ಲರೂ ಕೂಡಿ ಒಂದು ಇಟ್ಟಿಗೆಯ ಸಮಾಧಿ ಕಟ್ಟಿ, ಆತ ಇದ್ದ ಅವಸ್ಥೆಯಲ್ಲೇ ಆತನನ್ನು ಅದರಲ್ಲಿ ಹೂಳಿಬಿಟ್ಟರು. ಒಂದು ಸಾವಿರ ವರ್ಷಗಳಾದ ನಂತರ ಯಾರೊ ಕೆಲವರು ಆ ಸಮಾಧಿಯನ್ನು ಬಗೆದು ನೋಡಿದರು. ಆಗ ಅವರಿಗೆ ಕಂಡು ಬಂತು, ಯಾರೋ ಒಬ್ಬ ಸಮಾಧಿಸ್ಥನಾಗಿ ಅಲ್ಲಿ ಕುಳಿತಿರುವುದು. ಜನ ಆತ ಒಬ್ಬ ಮಹಾಪುರುಷನೇ ಎಂದು ಭಾವಿಸಿ ಆತನನ್ನು ಪೂಜಿಸಲಾರಂಭಿಸಿದರು. ಆತನನ್ನು ಹಿಡಿದು ಸ್ವಲ್ಪ ಅಲುಗಾಡಿಸಿ ನೋಡಲಾಗಿ, ಆತನ ನಾಲಗೆ ಸ್ವಸ್ಥಾನಕ್ಕೆ ಹಿಂದಿರುಗಿತು. ಒಡನೇ ಆತನಿಗೆ ಬಾಹ್ಯ ಪ್ರಜ್ಞೆ ಬಂದು ಕೂಗಿಕೊಳ್ಳಲಾರಂಭಿಸಿದ: "ಕಣ್ಣುಕಟ್ಟೇ ಬಾ! ಭ್ರಮೆಯೇ ಬಾ! ಓ ರಾಜ, ದುಡ್ಡು ಕೊಡು! ಬಟ್ಟೆ ಬರೆ ಕೊಡು!"**

ಶ್ರೀರಾಮಕೃಷ್ಣರನ್ನು ಇಷ್ಟು ಬಾರಿ ಭೇಟಿ ಮಾಡಿದ ಮೇಲೆ ನಾನು ಅಚ್ಚರಿಪಡಲು ಪ್ರಾರಂಭಿಸಿದೆ: ಯಾರಿವರು? ನನ್ನೊಂದಿಗೆ ಇಷ್ಟು ಆತ್ಮೀಯತೆಯಿಂದ ಮಾತನಾಡುತ್ತಾರಲ್ಲ! ಸಂಪೂರ್ಣ ನನ್ನವರೇ ಆಗಿದ್ದಾರೆ ಎಂದು ನಾನು ಭಾವಿಸುವಂತೆ ಮಾಡಿದ್ದಾರಲ್ಲ! ನನ್ನ ಪಾಪಗಳ ಬಗ್ಗೆ ನನಗೆ ಈಗ ಭಯವೇ ಆಗುತ್ತಿಲ್ಲ. ಏಕೆಂದರೆ ನನಗೀಗ ಅವರು ನನ್ನನ್ನು ಎಂದೂ ತಿರಸ್ಕರಿಸುವುದಿಲ್ಲವೆಂಬ ವಿಶ್ವಾಸವಿದೆ. ನನ್ನ ಒಳಗು-ಹೊರಗುಗಳನ್ನು ಅವರು ಸಂಪೂರ್ಣವಾಗಿ ಬಲ್ಲರು. ಆದರೂ ನಾನು ಅವರಲ್ಲಿ ಎಲ್ಲವನ್ನೂ ಹೇಳಿಕೊಂಡುಬಿಡುವುದು ನನಗೆ ಬಹಳ ಒಳ್ಳೆಯದೆಂದು ತೋರುವುದು. ನಾನು ಅವರ ಪಾದಗಳಲ್ಲಿ ಆಶ್ರಯವನ್ನು ಪಡೆಯಬೇಕು, ಏಕೆಂದರೆ ಅವರೊಬ್ಬರೇ ನನಗೆ ಶಾಂತಿಯನ್ನು ನೀಡಲು ಸಾಧ್ಯ.

ಈ ಭಾವನೆಯಿಂದ ನಾನು ದಕ್ಷಿಣೇಶ್ವರಕ್ಕೆ ಹೋದೆ. ಶ್ರೀರಾಮಕೃಷ್ಣರು ದಕ್ಷಿಣದ ವರಾಂಡದಲ್ಲಿ ಕುಳಿತಿದ್ದುದು ಕಾಣಿಸಿತು. ಅವರು ಭವನಾಥನೆಂಬ ಯುವಕ ಭಕ್ತನೊಂದಿಗೆ ಮಾತನಾಡುತ್ತಿದ್ದರು. ನಾನು ಶ್ರೀರಾಮಕೃಷ್ಣರಿಗೆ ದೀರ್ಘ ದಂಡ ಪ್ರಣಾಮ ಮಾಡಿ, **ಗುರುರ್ಬ್ರಹ್ಮ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ । ಗುರುಸ್ಸಾಕ್ಷಾತ್ ಪರಬ್ರಹ್ಮ ತಸ್ಮೈ ಶ್ರೀಗುರವೇ ನಮಃ॥** ಎಂಬ ಶ್ಲೋಕವನ್ನು ಮನಸ್ಸಿನಲ್ಲಿಯೇ ಹೇಳಿಕೊಂಡೆನು. ಅವರು, "ಇದೀಗ ನಿನ್ನ ವಿಷಯವನ್ನೇ ಮಾತನಾಡುತ್ತಿದ್ದೆ. ಅದನ್ನು ನೀನು ನಂಬದಿದ್ದರೆ ಭವನಾಥನನ್ನೇ ಕೇಳು!" ಎಂದರು.

ಸ್ವಲ್ಪ ಸಮಯದ ನಂತರ ನನಗೆ ಅವರು ಆಧ್ಯಾತ್ಮಿಕ ಉಪದೇಶವನ್ನು ನೀಡಲು ಪ್ರಾರಂಭಿಸಿದರು. ನಾನು ಅವರನ್ನು ತಡೆದು ಹೇಳಿದೆ, "ನಾನು ಯಾವ ಬುದ್ಧಿವಾದವನ್ನೂ ಕೇಳುವುದಿಲ್ಲ. ಅಂತಹವನ್ನು ಬಂಡಿಗಟ್ಟಲೆ ನಾನೇ ಬರೆದಿರುವೆನು. ಅದರಿಂದ ಏನೂ ಉಪಯೋಗವಿಲ್ಲ. ನನ್ನ ಜೀವನವನ್ನು ಪರಿವರ್ತಿಸುವುದಕ್ಕೆ ಏನನ್ನಾದರೂ ಮಾಡಿ." ಇದನ್ನು ಕೇಳಿ, ಶ್ರೀರಾಮಕೃಷ್ಣರಿಗೆ ಬಹಳ ಸಂತೋಷವಾಯಿತು. ಅವರ ಸೋದರಳಿಯ ರಾಮಲಾಲ ಅಲ್ಲೇ ಇದ್ದ. ಶ್ರೀರಾಮಕೃಷ್ಣರು ರಾಮಲಾಲನಿಗೆ, **"ಏಕಾಂತವಾದ ಗುಹೆಗೆ ಹೋಗಿ ಬಾಗಿಲು ಹಾಕಿಕೊ. ಅಲ್ಲಿಯೂ ಶಾಂತಿ ಸಿಗುವುದಿಲ್ಲ. ಎಲ್ಲಿ ವಿಶ್ವಾಸ ಇದೆಯೊ ಅಲ್ಲಿ ಶಾಂತಿ ಇದೆ, ಏಕೆಂದರೆ ನಂಬಿಕೆಯೇ ಎಲ್ಲಕ್ಕೂ ಮೂಲ"** ಎಂಬ ಅರ್ಥ ಬರುವ ಒಂದು ಸ್ತೋತ್ರವನ್ನು ಹೇಳುವಂತೆ ಹೇಳಿದರು. ಆ ಸಮಯದಲ್ಲಿ, ಶ್ರೀರಾಮಕೃಷ್ಣರ ತುಟಿಯ ಮೇಲೆ ನಗು ಸುಳಿದಾಡುವುದು ನನಗೆ ಕಾಣಿಸಿತು. ಎಲ್ಲ ದೋಷಗಳಿಂದಲೂ ಮುಕ್ತನಾದೆನೆಂಬ ಅನುಭವ ಆಗ ನನಗಾಯಿತು. ಆ ಕ್ಷಣದಲ್ಲಿ ನನ್ನ ಅಹಂಕಾರಪೂರಿತ ಬುದ್ಧಿ ಅವರ ಪಾದಗಳಿಗೆ ನಮಿಸಿತು. ಅವರಲ್ಲಿ ನನಗೊಂದು ನೆಲೆ ಸಿಕ್ಕಿತು, ನನ್ನ ಎಲ್ಲ ಭಯಗಳೂ ಬಿಟ್ಟುಹೋದುವು. ನಾನು ಅವರಿಗೆ ಪ್ರಣಾಮ ಮಾಡಿ ಮನೆಗೆ ಹಿಂತಿರುಗಲು ಅನುವಾದೆ. ಅವರು ಕೋಣೆಯ ಉತ್ತರ ವರಾಂಡದವರೆಗೂ ನನ್ನೊಡನೆ ಬಂದರು. ಅಲ್ಲಿ ನಾನು ಅವರನ್ನು ಕೇಳಿದೆ, "ಈಗ ನಿಮ್ಮ ಕೃಪೆ ನನ್ನ ಮೇಲೆ ಆಗಿದೆ. ನಾನು ಇದುವರೆಗೆ ಮಾಡುತ್ತಿರುವ ಕೆಲಸವನ್ನು ಮುಂದುವರಿಸಲೆ?" ಶ್ರೀರಾಮಕೃಷ್ಣರು, "ಆಗಲಿ, ಏಕಾಗಬಾರದು?" ಎಂದು ಉತ್ತರವಿತ್ತರು. ನಾಟಕರಂಗದೊಡನೆ ನನಗೆ ಇರುವ ಸಂಬಂಧದಿಂದ ನನ್ನ ಆಧ್ಯಾತ್ಮಿಕ ಜೀವನಕ್ಕೆ ಧಕ್ಕೆ ಉಂಟಾಗಲಾರದು ಎಂದು ಅವರ ಮಾತುಗಳಿಂದ ತಿಳಿದುಕೊಂಡೆ.

ನನ್ನ ಹೃದಯ ಆನಂದದಿಂದ ತುಂಬಿತು. ನನಗೆ ಹೊಸ ಜನ್ಮ ಬಂದಂತಾಯಿತು. ನಾನು ಸಂಪೂರ್ಣವಾಗಿ ಬೇರೆ ಮನುಷ್ಯನೇ ಆಗಿಹೋದೆ. ಈಗ ನನ್ನ ಮನಸ್ಸಿನಲ್ಲಿ ಸಂದೇಹಗಳು, ದ್ವಂದ್ವಗಳು ಯಾವುವೂ ಇರಲಿಲ್ಲ. "ಭಗವಂತ ಸತ್ಯ. ಭಗವಂತನೇ ನನಗೆ ಆಸರೆ. ನನಗೆ ಈ ದಿವ್ಯಪುರುಷರಲ್ಲಿ ಆಶ್ರಯ ಸಿಕ್ಕಿದೆ. ಈಗ ನಾನು ದೇವರನ್ನು ಸುಲಭವಾಗಿ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು." – ಇಂತಹ ಆಲೋಚನೆಗಳು ಹಗಲುರಾತ್ರಿ ನನ್ನ ಮೇಲೆ ಪರಿಣಾಮ ಬೀರಿದುವು. "ನಾನು ನಿರ್ಭೀತ. ನನ್ನ ನಿಜವಾದ ನೆಲೆ ನನಗೆ ಸಿಕ್ಕಿದೆ. ಪ್ರಪಂಚ ಇನ್ನು ನನ್ನನ್ನು ಕಟ್ಟಿಹಾಕಲಾರದು. ಅತ್ಯಂತ ದೊಡ್ಡ ಭಯವಾದ ಮೃತ್ಯುಭಯ ಕೂಡ ನನ್ನಿಂದ ಹೋಯಿತು" ಎಂದು ಭಾವಿಸತೊಡಗಿದೆ. ಎಚ್ಚರವಾಗಿದ್ದಾಗ ಮತ್ತು ಕನಸಿನಲ್ಲಿಯೂ ಮನಸ್ಸು ಅದೇ ಸ್ಥಿತಿಯಲ್ಲಿರುತ್ತಿತ್ತು.

ಈ ಮಧ್ಯೆ, ಶ್ರೀರಾಮಕೃಷ್ಣರು ನನ್ನ ಬಗ್ಗೆ ವಿಶ್ವಾಸಪೂರ್ವಕವಾಗಿ ಮಾತನಾಡಿದರೆಂದು ಅನೇಕ ಭಕ್ತರಿಂದ ತಿಳಿದುಬಂತು. ಯಾರಾದರೂ ನನ್ನನ್ನು ಟೀಕಿಸಿದರೆ, ಶ್ರೀರಾಮಕೃಷ್ಣರು ಹೀಗೆ ಹೇಳುತ್ತಿದ್ದರಂತೆ: "ಅದು ನಿಜವಲ್ಲ. ನಿಮಗೆ ತಿಳಿಯದು. ಅವನಿಗೆ ಅಪಾರ ನಂಬಿಕೆಯಿದೆ."